**ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ**

**ಸಿಸಿ ನಂ. 690/2024**

**ಚಾಸಾಃ 3/ಫ್ರಾಸಾಃ 2**

**ದಿನಾಂಕಃ** 03-06-2026

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| **ಸಾಕ್ಷಿದಾರರ ಹೆಸರು** | ಸುಭಾಷ ಗಾಯಕವಾಡ |
|---|---|
| ತಂದೆ/ಗಂಡನ ಹೆಸರು | ರುದ್ರಪ್ಪ |
| ವಯಸ್ಸು | 42 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ | ಬನಹಟ್ಟಿ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ಚಾಸಾ-2 ಮತ್ತು 1 ನೇ ಆರೋಪಿತನ ಪರಿಚಯ ಇಲ್ಲ. ಸುಮಾರು 1-ವರ್ಷದ ಹಿಂದೆ ವೈಯಕ್ತಿಕ ಕೆಲಸದ ನಿಮಿತ್ಯ ಪೋಲಿಸ ಠಾಣೆಗೆ ಹೋಗಿದ್ದಾಗ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಗೆ ಸಹಿ ಮಾಡಿದ್ದೇನೆ. ಆದರೆ ಅದರಲ್ಲಿ ಬರೆದ ವಿಚಾರ ಗೊತ್ತಿಲ್ಲ. ಸಾಕ್ಷಿಯು ನಿಪಿ-1 ಸ್ಥಳ ಪಂಚನಾಮೆ ಮೇಲಿನ ತಮ್ಮ ಸಹಿಯನ್ನು ಗುರುತಿಸಿ ಒಪ್ಪಿಕೊಂಡಿರುತ್ತಾರೆ. ಕಾರಣ ಸಾಕ್ಷಿಯ ಸಹಿನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೆ ಮುದ್ದೆ ಮಾಲನ್ನು ಜಪ್ತ ಮಾಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಪ್ರಾರ್ಥಿಸಿಕೊಂಡರು, ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸದರಿ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಮಾನ್ಯ ಸಸಅ ರವರಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದ**

ದಿ.20-11-2024 ರಂದು ಸಂಜೆ 6.00 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ-2 ನರಗುಂದ ಪಟ್ಟಣದ ಒಡ್ಡರ ಓಣಿ ಕ್ರಾಸ ಹತ್ತಿರ ಇದ್ದಾಗ ನರಗುಂದ ಪೋಲಿಸರು ನಮ್ಮ ಹತ್ತಿರ ಬಂದು ಸದರಿ ದಿನ ಇಂತಿಯಾಜ ಚಳ್ಳಮರದ, ಸಾಃ ಶಿರೋಳ ಎಂಬ ವ್ಯಕ್ತಿಯು ಓಸಿ ಮಟಕಾ ಜೂಜಾಟದ ಬುಕ್ಕಿಯಾದ ಹಸನ್ ಸಾಃರಾಮದುರ್ಗ ಎಂಬುವವರಿಗೆ ಓ ಸಿ ಮಟಕಾ ಜೂಜಾಟದ ಪಟ್ಟಿ ಮತ್ತು ಹಣವನ್ನು ನೀಡುವ ಸಲುವಾಗಿ ಸಂಜೆ 5.30 ಗಂಟೆಗೆ

ಶಿರೋಳ ಗ್ರಾಮದ ಸರಕಾರಿ ಆಸ್ಪತ್ರೆ ಎದುರಿನ ಸಾರ್ವಜನಿಕ ರಸ್ತೆಯ ಬದಿಯಲ್ಲಿ ನಿಂತು ಹೋಗಿ ಬರುವ ಜನರನ್ನು ಕರೆದು ಅದೃಷ್ಟ ಸಂಖ್ಯೆಗಳ ಮೇಲೆ ಹಣ ಕಟ್ಟಿರಿ, ಅದೃಷ್ಟ ಸಂಖ್ಯೆ ತಾಗಿದರೆ ನಿಮಗೆ 1 ರೂ. ಗೆ 80 ರೂ. ಕೊಡುತ್ತೇನೆ ಎಂದು ಜನರಿಂದ ಹಣ ಪಡೆದು ಅಕ್ರಮವಾಗಿ ಓಸಿ ಮಟಕಾ ಜೂಜಾಟ ಆಡುತ್ತಿರುವ ಬಗ್ಗೆ ಪ್ರಕರಣ ದಾಖಲಾಗಿದ್ದು ಆ ಕುರಿತು ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ನಾವು ಒಪ್ಪಿ ನಾವು ಅವರೊಂದಿಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸಂಜೆ 6.30 ಗಂಟೆಗೆ ಪೋಲಿಸರೊಂದಿಗೆ ಠಾಣೆಯಿಂದ ಹೊರಟು 7.00 ಗಂಟೆಗೆ ಶಿರೋಳ ಗ್ರಾಮದ ಸರಕಾರಿ ಆಸ್ಪತ್ರೆ ಹತ್ತಿರ ತಲುಪಿರುತ್ತೇವೆ ಎಂದರೆ ಸರಿಯಲ್ಲ. ಪೋಲಿಸರು ರಸ್ತೆಯ ಬದಿಯ ಗಿಡಗಳ ಮರೆಯಲ್ಲಿ ವಾಹನ ನಿಲ್ಲಿಸಿ ನಮ್ಮನ್ನು ಕರೆದುಕೊಂಡು ಮಾಹಿತಿಯಲಿ ತಿಳಿಸಿದ ಸ್ಥಳದ ಹತ್ತಿರ ನಡೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೋಲಿಸರು ಸದರಿ ಸ್ಥಳದಲ್ಲಿ ನಿಂತು ವಿಕ್ಷಣೆ ಮಾಡಿದಾಗ ಒಬ್ಬ ವ್ಯಕ್ತಿ ಶಿರೋಳ-ಕೊಣ್ಣೂರು ರಸ್ತೆಯ ಬದಿಯಲ್ಲಿ, ಬೀದಿ ದೀಪದ ಕೆಳಗೆ ನಿಂತು ಸಾರ್ವಜನಿಕರನ್ನು ಕರೆದು ಅದೃಷ್ಟ ಸಂಖ್ಯೆಗಳ ಮೇಲೆ ಹಣ ಕಟ್ಟಿರಿ, ಅದೃಷ್ಟ ಸಂಖ್ಯೆ ತಾಗಿದರೆ ನಿಮಗೆ 1 ರೂ. ಗೆ 80 ರೂ. ಕೊಡುತ್ತೇನೆ ಎಂದು ಜನರಿಂದ ಹಣ ಪಡೆದು ಅಕ್ರಮವಾಗಿ ಓಸಿ ಮಟಕಾ ಜೂಜಾಟ ಆಡುತ್ತಿರುವ ಬಗ್ಗೆ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಕೂಡಲೇ ಅಧಿಕಾರಿಗಳು ನಮ್ಮ ಸಮಕ್ಷಮ 7.10 ಗಂಟೆಗೆ ದಾಳಿ ಮಾಡಿದಾಗ ಓಸಿ ಸಂಖ್ಯೆ ಬರೆಸುತ್ತಿದ್ದ ವ್ಯಕ್ತಿಗಳು ಪೋಲಿಸರನ್ನು ನೋಡಿ ಓಡಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಓಸಿ ಸಂಖ್ಯೆ ಬರೆದುಕೊಳ್ಳುತ್ತಿದ್ದ ವ್ಯಕ್ತಿಯನ್ನು ಪೋಲಿಸರು ಹಿಡಿದು ನಮ್ಮ ಸಮಕ್ಷಮ ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಇಂತಿಯಾಜ ತಂದೆ ರಾಜೇಸಾಬ ಚಳ್ಳಮರದ, ಸಾಃ ಶಿರೋಳ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ಪೋಲಿಸರು ನಮ್ಮ ಸಮಕ್ಷಮ ಸದರಿ ವ್ಯಕ್ತಿಯನ್ನು ಅಂಗ ಶೋಧನೆ ಮಾಡಿದಾಗ ಆತನ ಪ್ಯಾಂಟಿನ ಬಲ ಜೇಬಿನಲ್ಲಿ ಒಟ್ಟು ರೂ.320/- ನಗದು ಹಣ, ಅಂಗಿ ಜೇಬಿನಲ್ಲಿ ಓಸಿ ಅಂಕಿ ಬರೆದ ಚೀಟಿ ಹಾಗೂ ಒಂದು ಬಾಲ್ ಪೆನ್ ಸಿಕ್ಕಿರುತ್ತವೆ ಎಂದರೆ ಸರಿಯಲ್ಲ. ಸದರಿ ವಸ್ತುಗಳ ಬಗ್ಗೆ ಆರೋಪಿತನನ್ನು ಪೋಲಿಸರು ವಿಚಾರಣೆ ಮಾಡಿದಾಗ ಸದರಿ ವ್ಯಕ್ತಿಯು ಸದರಿ ಹಣ ಜನರು ಓಸಿ ಜೂಜಾಟಕ್ಕೆ ಹಚ್ಚಿದ ಹಣ ಎಂದು, ಚೀಟಿಯಲ್ಲಿ ಬರೆದ ಅಂಕಿಗಳು ಜನರು ಹೇಳಿ ಬರೆಯಿಸಿದ ಓಸಿ ನಂಬರ ಎಂದು ಹಾಗೂ ಸದರಿ ಪೆನನಿಂದ ಓಸಿ ಅಂಕಿಗಳನ್ನು ಬರೆದಿರುತ್ತೇನೆ ಎಂದು ಆರೋಪಿತನು ಒಪ್ಪಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ಪೋಲಿಸರು ಸಂಜೆ 7.10 ರಿಂದ 7.45 ರವರೆಗೆ ನಮ್ಮ ಸಮಕ್ಷಮ ನಿಪಿಃ 1 ರಂತೆ ಸ್ಥಳ ಪಂಚನಾಮೆ ಜರುಗಿಸಿ , ಸದರಿ ವಸ್ತುಗಳನ್ನು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ವ್ಯಕ್ತಿಯನ್ನು ಬಂಧಿಸಿ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ತಿಳಿದು, ನಿಪಿ-1 ದಾಖಲೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈಗ ಆರೋಪಿತನಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ ಎಂದು ತಿಳಿಸಿರುತ್ತಾರೆ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ